ಪ್ರಜಾವಾಣಿ

# ಜೈನ್ ವಿಶ್ವವಿದ್ಯಾಲಯ ತಂಡಕ್ಕೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿನಯ್ (57) ಅವರ ಅರ್ಧಶತಕದ ಬಲದಿಂದ ಜೈನ್ ವಿಶ್ವವಿದ್ಯಾಲಯ ತಂಡ ಜೆ.ಸಿ ಸುರಾನಾ ಸ್ಮಾರಕ ಇಲ್ಲಿ ನಡೆಯುತ್ತಿರುವ ಅಂತರ ಎಂಜಿನಿಯರಿಂಗ್ ಕಾಲೇಜುಗಳ ಟ್ವೆಂಟಿ–20 ಕ್ರಿಕೆಟ್ ಟೂರ್ನಿಯಲ್ಲಿ ಗುರುವಾರ ಈಸ್ಟ್ ವೆಸ್ಟ್ ಕಾಲೇಜು ಎದುರು 6 ವಿಕೆಟ್‌ಗಳ ಗೆಲುವು ದಾಖಲಿಸಿದೆ.

ದಿನದ ಇನ್ನೊಂದು ಪಂದ್ಯದಲ್ಲಿ ಎಂ.ಎಸ್. ರಾಮಯ್ಯ ಕಾಲೇಜು ತಂಡ ಮೊದಲು ಬ್ಯಾಟ್ ಮಾಡಿ 20 ಓವರ್‌ಗಳಲ್ಲಿ ಆರು ವಿಕೆಟ್ ಕಳೆದುಕೊಂಡು 111 ರನ್ ಕಲೆ ಹಾಕಿತು. ಈ ಗುರಿಯನ್ನು ದಿಟ್ಟತನದಿಂದ ಬೆನ್ನಟ್ಟಿದ ಸುರಾನಾ ಎರಡು ವಿಕೆಟ್ ಕಳೆದುಕೊಂಡು ಗುರಿ ತಲುಪಿತು.

**ಸಂಕ್ಷಿಪ್ತ ಸ್ಕೋರು: ಈಸ್ಟ್‌ವೆಸ್ಟ್ ಕಾಲೇಜು:** 19.1 ಓವರ್‌ಗಳಲ್ಲಿ 113 (ನಿಖಿಲ್ 36; ರಜತ್ 30ಕ್ಕೆ3, ಡೆಸ್ಮಂಡ್ 10ಕ್ಕೆ2). **ಜೈನ್ ವಿಶ್ವವಿದ್ಯಾಲಯ:** 11.5 ಓವರ್‌ಗಳಲ್ಲಿ 118 (ವಿನಯ್ 57, ಆದಿತ್ಯಾ 43). **ಫಲಿತಾಂಶ:** ಜೈನ್ ವಿಶ್ವವಿದ್ಯಾಲಯ ತಂಡಕ್ಕೆ 6 ವಿಕೆಟ್‌ಗಳ ಜಯ.

**ಎಮ್.ಎಸ್.ರಾಮಯ್ಯ ಕಾಲೇಜು:** 20 ಓವರ್‌ಗಳಲ್ಲಿ 6 ವಿಕೆಟ್‌ಗೆ 111. **ಸುರಾನಾ ಬ್ಲೂಸ್:** 13 ಓವರ್‌ಗಳಲ್ಲಿ 2 ವಿಕೆಟ್‌ಗೆ 112. **ಫಲಿತಾಂಶ:** ಸುರಾನಾ ಬ್ಲೂಸ್ ತಂಡಕ್ಕೆ 8 ವಿಕೆಟ್‌ಗಳ ಜಯ.